# ನಾಲ್ಕೋದ ಉತ್ಪಾದನೆ

ನವದೆಹಲಿ : ನವೆಂಬರ್ 09,2005

ಸಾರ್ವಜನಿಕ ಸ್ವಾಮ್ಯದ ರಾಷ್ಟ್ರೀಯ ಅಲ್ಯೂಮಿನಿಯಂ ಕಂಪನಿ ನಿಯಮಿತ (ನಾಲ್ಕೋ) ವು ಪ್ರಸಕ್ತ ಹಣಕಾಸು ವರ್ಷದ ಎರಡನೆ ಅವಧಿಗೆ ನಿಗದಿಪಡಿಸಲಾದ ಉತ್ಪಾದನಾ ಗುರಿಯನ್ನು ಮೀರಿದೆ . ಜುಲೈ–ಸೆಪ್ಟೆಂಬರ್ 2005 ರ ಅವಧಿಯಲ್ಲಿ ಕಂಪನಿಯು 12,53,048 ಟನ್‌ಗಳಷ್ಟು ಬಾಕ್ಸೈಟ್ ಸಾಗಿಸಿದ್ದು 3 ,93,700 ಟನ್‌ಗಳಷ್ಟು ಅಲ್ಯೂಮಿನಿಯಂ ಹೈಡ್ರೇಟ್ ಹಾಗೂ 90631 ಟನ್‌ಗಳಷ್ಟು ಅಲ್ಯೂಮಿನಿಯಂನ್ನು ಉತ್ಪಾದಿಸಿದೆ . ನಿಗದಿಪಡಿಸಲಾದ ಗುರಿ ಕ್ರಮವಾಗಿ 12,20,000 , 3,86,000 ಹಾಗು 8,6950 ಟನ್‌ಗಳಾಗಿತ್ತು.. ಶ್ರೀ ಆರ್ ಪ್ರಧಾನ್ , ಸಿ ಎಂ ಡಿ ನವದೆಹಲಿಯಲ್ಲಿಂದು ಶ್ರೀ ಎ ಕೆ ಡಿ ಜಾದವ್ ಕಾರ್ಯದರ್ಶಿಗಳು, ಗಣಿ ಇಲಾಖೆ ನಡೆಸಿದ ಪರಮರ್ಶನಾ ಸಭೆಯಲ್ಲಿ ಈ ಮಾಹಿತಿಯನ್ನು ನೀಡಿದರು . ಇದೇ ಅವಧಿಯಲ್ಲಿ ಕಂಪನಿಯು 283.04 ಕೋಟಿ ರೂಪಾಯಿಗಳಷ್ಟು ನಿವ್ವಳ ಲಾಭವನ್ನು ಗಳಿಸಿದ್ದು ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದಾಗ ಇದು ಶೇಕಡ 2.7 ರಷ್ಟು ಹೆಚ್ಚಳವಾಗಿದೆ .

ಶ್ರೀ ಎ ಕೆ ಡಿ ಜಾಧವ್ , ಕಾರ್ಯದರ್ಶಿಗಳು ಗಣಿ ಇಲಾಖೆ ಇವರು ಮಾತನಾಡುತ್ತ ಮುಂಬರುವ ದಿನಗಳಲ್ಲಿ ಕಂಪನಿಯು ಮಾರಾಟ ಹಾಗೂ ವಿದ್ಯುತ್ ಉತ್ಪಾದನೆಯನ್ನು ಹೆಚ್ಚಿಸಬೇಕೆಂದು ಹೇಳಿದರು . ವೆಚ್ಚ ವನ್ನು ತಗ್ಗಿಸುವ ದಿಶೆಯಲ್ಲಿ ಕಲ್ಲಿದ್ದಲ ಬಳಕೆಯನ್ನು ಅದಷ್ಟು ಕಡಿಮೆ ಮಾಡಬೇಕೆಂದರು .

ಇದೇ ಅವಧಿಯಲ್ಲಿ ಕಂಪನಿಯು 65233 ಟನ್‌ಗಳಷ್ಟು ಲೋಹ ಪದಾರ್ಥಗಳನ್ನು ದೇಶೀಯವಾಗಿ ಮಾರಾಟ ಮಾಡಿದ್ದು ನಿಗದಿಪಡಿಸಲಾದ ಗುರಿ 54,800 ಟನ್‌ಗಳಾಗಿತ್ತು . ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದಾಗ ಈ ಪ್ರಮಾಣದಲ್ಲಿ ಶೇಕಡ 17.52 ರಷ್ಟು ಹೆಚ್ಚಳವಾಗಿದೆ . ದೇಶೀಯ ಉತ್ಪಾದನೆಗಾಗಿ ಹೆಚ್ಚಾಗಿ ಬಳಕೆ ಮಾಡಿಕೊಂಡಿದ್ದರಿಂದ ಅಲ್ಯೂಮಿನಿಯಾ ರಫ್ತು ಪ್ರಮಾಣದಲ್ಲಿ ಕಡಿಮೆಯಾಗಿದೆ .

******

ಅದ: ಪಚ:ಪಾ: ಆ:ಕ: ಬೆಂ:15:15 09–11–2005